MESCOM-GMAH0ADM/492/2021-GM ADM HR
I/22668/2022 / ದಿನಾಂಕ : 08.08.2022

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ


(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಂಪನಿ ಗುರುತಿನ ಸಂಖ್ಯೆ: (ಸಿ.ಐ.ಎನ್): ಯು40109ಕೆಎ2002ಎಸ್‌ಜಿಸಿ030425
ಕಂಪನಿಯ ಅಧಿಕೃತ ಕಛೇರಿ: ಆಡಳಿತ ಕಛೇರಿ, 'ಮೆಸ್ಕಾಂ., ಭವನ' ಕಾವೂರು ಅಡ್ಡ ರಸ್ತೆ, ಬಿಜೈ
ಅಂಚೆ ಪೆಟ್ಟಿಗೆ ಸಂಖ್ಯೆ: 1130, ಮಂಗಳೂರು-575004
ಇ-ಮೇಲ್: gm_mescom@rediffmail.com
ಅಂತರ್ಜಾಲ: www.mescom.karnataka.gov.in
ದೂರವಾಣಿ ಸಂಖ್ಯೆ: 0824-2885766


## ಸುತ್ತೋಲೆ

ವಿಷಯ: ಸ್ವಾತಂತ್ರ್ಯದ ಅಮೃತ ಮಹೋತ್ಸವ ದಿನಾಚರಣೆಯನ್ನು ಕಾರ್ಪೋರೇಟ್ ಕಛೇರಿಯಲ್ಲಿ ಆಚರಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ : I/22088/2022 ದಿನಾಂಕ : 28.07.2022.

*******

ದಿನಾಂಕ 15.08.2022 ರಂದು ಆಚರಿಸಲ್ಪಡುವ ಸ್ವಾತಂತ್ರ್ಯದ ಅಮೃತ ಮಹೋತ್ಸವ ದಿನಾಚರಣೆಯ ನಿಮಿತ್ತ ಮೆಸ್ಕಾಂ., ಕಾರ್ಪೋರೇಟ್ ಕಛೇರಿ, "ಮೆಸ್ಕಾಂ. ಭವನ", ಬಿಜೈ, ಮಂಗಳೂರು ಇಲ್ಲಿ ಪೂರ್ವಾಹ್ನ 8.30 ಕ್ಕೆ ಧ್ವಜಾರೋಹಣ ಕಾರ್ಯಕ್ರಮವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ನೆರವೇರಿಸಲಿದ್ದಾರೆ.

ದೇಶವು ಈ ವರ್ಷ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಿರುವ ಹಿನ್ನೆಲೆಯಲ್ಲಿ ಕಾರ್ಪೋರೇಟ್ ಕಛೇರಿಯ ಅಧಿಕಾರಿ/ನೌಕರರು/ಹೊರಗುತ್ತಿಗೆ ಸಿಬ್ಬಂದಿಗಳಿಗೆ ಉಲ್ಲೇಖ (1) ರ ಸುತ್ತೋಲೆಯನ್ವಯ ಈ ಕೆಳಕಂಡಂತೆ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

| ಕ್ರ.ಸಂ. | ಸ್ಪರ್ಧೆಯ ಹೆಸರು | ಮೇಲ್ವಿಚಾರಣಾ ಅಧಿಕಾರಿ | ಸ್ಪರ್ಧೆಯ ದಿನಾಂಕ |
|---|---|---|---|
| 1 | ದೇಶಭಕ್ತಿ ಗೀತೆ ಸ್ಪರ್ಧೆ | ಶ್ರೀ ಹರೀಶ್ ಕುಮಾರ್ ವಿ.,<br>ಅಧೀಕ್ಷಕ ಇಂಜಿನಿಯರ್(ವಿ)(ಯೋ) | 10.08.2022 |
| 2 | ಭಾಷಣ ಸ್ಪರ್ಧೆ | ಶ್ರೀ ಮುರಳಿಧರ ನಾಯಕ್<br>ನಿಯಂತ್ರಣಾಧಿಕಾರಿ -2 | 11.08.2022 |
| 3 | ಚಿತ್ರಕಲಾ ಸ್ಪರ್ಧೆ | ಶ್ರೀ ಪ್ರಭಾತ್ ಎಂ. ಜೋಶಿ<br>ಕಂಪೆನಿ ಕಾರ್ಯದರ್ಶಿ | 12.08.2022 |

ಈ ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವ ಅಧಿಕಾರಿ/ನೌಕರರು ಸಂಬಂಧಪಟ್ಟ ಸ್ಪರ್ಧೆಗಳ ಮೇಲ್ವಿಚಾರಣಾ ಅಧಿಕಾರಿಗಳಲ್ಲಿ ದಿನಾಂಕ 09.08.2022 ರ ಒಳಗಾಗಿ ಹೆಸರನ್ನು ನೋಂದಾಯಿಸಿಕೊಳ್ಳುವುದು. ಮೇಲ್ವಿಚಾರಣಾ ಅಧಿಕಾರಿಗಳು ನಿಗದಿತ ದಿನಾಂಕಗಳಂದು ಸ್ಪರ್ಧೆಗಳನ್ನು ಆಯೋಜಿಸಿ ವಿಜೇತರ ವಿವರಗಳನ್ನು ಪ್ರಧಾನ ವ್ಯವಸ್ಥಾಪಕರು (ಆ&ಮಾ.ಸಂ.ಅ.), ಮೆಸ್ಕಾಂ., ರವರಿಗೆ ಹಸ್ತಾಂತರಿಸುವುದು (ಸ್ಪರ್ಧೆಯ ನಿಯಮಗಳನ್ನು ಸೂಚನಾಫಲಕದಲ್ಲಿ ಪ್ರಕಟಿಸಲಾಗುವುದು).

ಧ್ವಜಾರೋಹಣದ ನಂತರ ಕಾರ್ಪೋರೇಟ್ ಕಛೇರಿಯ ಸಭಾಂಗಣದಲ್ಲಿ ಜರುಗುವ ಸಭೆಯಲ್ಲಿ ಈ ಕೆಳಕಂಡ ಸಾಧಕರು/ವಿಜೇತರುಗಳಿಗೆ ಪ್ರಶಸ್ತಿ/ಬಹುಮಾನಗಳನ್ನು ವಿತರಿಸಿ ಅಭಿನಂದಿಸಲಾಗುವುದು.

1. ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಕಾರ್ಪೋರೇಟ್ ಕಛೇರಿಯ ಅಧಿಕಾರಿ/ನೌಕರರುಗಳಿಗೆ ಆಯೋಜಿಸಲಾದ ಸ್ಪರ್ಧೆಗಳ ವಿಜೇತರುಗಳಿಗೆ.
2. 2021-22 ನೇ ಸಾಲಿನಲ್ಲಿ ಎಂ.ಟಿ.ಟಿ.ಪಿ-2 ತರಬೇತಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಪ್ರತಿಭಾನ್ವಿತರಿಗೆ.
3. 2020-21 ನೇ ಸಾಲಿನಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿರುವ ಕಾರ್ಪೋರೇಟ್ ಕಛೇರಿಯ ಅಧಿಕಾರಿ/ನೌಕರರ ಪ್ರತಿಭಾನ್ವಿತ ಮಕ್ಕಳಿಗೆ.

ಈ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿ/ನೌಕರರು ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳು ತಮ್ಮ ಹೆತ್ತವರೊಂದಿಗೆ ಹಾಜರಾಗಿ ಪ್ರಶಸ್ತಿ ಸ್ವೀಕರಿಸುವಂತೆ ತಿಳಿಸಲಾಗಿದೆ.

ದಿನಾಂಕ 15.08.2022 ರಂದು ನೆರವೇರಿಸಲಾಗುವ ಧ್ವಜಾರೋಹಣ ಸಮಾರಂಭದಲ್ಲಿ ಕಾರ್ಪೋರೇಟ್ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ನೌಕರರು/ಹೊರಗುತ್ತಿಗೆ ಸಿಬ್ಬಂದಿಗಳು **ಕಡ್ಡಾಯವಾಗಿ** ಹಾಜರಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.

**ಆದೇಶದ ಮೇರೆಗೆ,**

ಮಾನ್ಯ ವ್ಯವಸ್ಥಾಪಕ ನಿರ್ದೇಶಕ ರವರಿಂದ
ಅನುಮೋದಿಸಲ್ಪಟ್ಟಿದೆ.

Signed by Harishchandra Borkar
Date: 08-08-2022 15:27:18
**ಪ್ರಧಾನ ವ್ಯವಸ್ಥಾಪಕರು (ಆ&ಮಾಸಂಅ)(ಪ್ರ)**
**ಮೆಸ್ಕಾಂ.**

**ಪ್ರತಿಗಳು:**

1. ನಿಯಂತ್ರಣಾಧಿಕಾರಿಗಳು (1&2), ಮೆಸ್ಕಾಂ, ಕಾರ್ಪೋರೇಟ್ ಕಚೇರಿ, ಮಂಗಳೂರು.
2. ಅಧೀಕ್ಷಕ ಇಂಜಿನಿಯರ್ (ವಿ)(ತಾಂ)/(ಖ)/(ವಾ)(ಯೋ), ಮೆಸ್ಕಾಂ, ಕಾರ್ಪೋರೇಟ್ ಕಚೇರಿ, ಮಂಗಳೂರು.
3. ಕಂಪೆನಿ ಕಾರ್ಯದರ್ಶಿ, ಮೆಸ್ಕಾಂ, ಕಾರ್ಪೋರೇಟ್ ಕಚೇರಿ, ಮಂಗಳೂರು.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ), ಮೆಸ್ಕಾಂ., ಕಾರ್ಪೋರೇಟ್ ಕಚೇರಿ, ಮಂಗಳೂರು.
5. ಲೆಕ್ಕಾಧಿಕಾರಿ (ಸಾ.ಸಂ&ಸಂ)/ಮುಖ್ಯ ಗುಮಾಸ್ತ, ಮೆಸ್ಕಾಂ, ಕಾರ್ಪೋರೇಟ್ ಕಚೇರಿ, ಮಂಗಳೂರು - ಕಾರ್ಯಕ್ರಮದ ಆಯೋಜನೆಗೆ ಕ್ರಮಕೈಗೊಳುವುದು.
6. ಪೊಲೀಸ್ ಉಪಾಧೀಕ್ಷಕರು, ಜಾಗೃತದಳ, ಮೆಸ್ಕಾಂ.,ವಲಯ ಕಛೇರಿ, ಮಂಗಳೂರು-ಧ್ವಜಾರೋಹಣಾ ದಿನದಂದು ಗೌರವ ವಂದನೆ ಸಲ್ಲಿಸಲು ಅಗತ್ಯ ಕ್ರಮಕೈಗೊಳ್ಳಲು ಕೋರಲಾಗಿದೆ.

(1–6: ತಮ್ಮ ಅಧೀನ ಅಧಿಕಾರಿ/ನೌಕರರು/ಹೊರಗುತ್ತಿಗೆ ಸಿಬ್ಬಂದಿಗಳಿಗೆ ಕಡ್ಡಾಯವಾಗಿ ಹಾಜರಾಗಲು ಸೂಚಿಸುವುದು.)

7. ಉಪಾಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ (ರಿ 659), ಮಂಗಳೂರು.
8. ಸಂಘಟನಾ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಮಂಗಳೂರು.
9. ಉಪಾಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಮಂಗಳೂರು.
10. ಕಂಪೆನಿ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಮಂಗಳೂರು.
11. ಉಪಾಧ್ಯಕ್ಷರು, ಕವಿಪ್ರನಿನಿ ಡಿಪ್ಲೊಮಾ ಇಂಜಿನಿಯರುಗಳ ಸಂಘ, ಮಂಗಳೂರು.
12. ಹಿರಿಯ ಆಪ್ತ ಕಾರ್ಯದರ್ಶಿ ವ್ಯನಿ/ನಿ(ತಾಂ).
13. ಆಪ್ತ ಕಾರ್ಯದರ್ಶಿ ಮು.ಆ.ಅ/ಆಸ